ಒ.ಎಸ್.ನಂಬ್ರಃ 408/2022
ಪಿ.ಡಬ್ಲ್ಯೂ ಃ 01

ದಿನಾಂಕಃ 03-08-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಃ **2 ನೇ ಪ್ರತಿವಾದಿ ಪರ ಶ್ರೀ. ಡಿ. ಎಸ್** ವಕೀಲರಿಂದ

ನಾನು ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಬೆಂಗಳೂರಿನಲ್ಲಿ ವಾಸವಿರುತ್ತೇನೆ. ಮದುವೆ ಆದಾಗಿನಿಂದಲೂ ಬೆಂಗಳೂರಿನಲ್ಲಿ ವಾಸವಿರತ್ತೇನೆ. ಮದುವೆ ಆಗಿ 40 ವರ್ಷ ಆಗಿರುತ್ತದೆ. ಕೇಸು ಹಾಕಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ಮದುವೆ ಆಗುವ ಪೂರ್ವದಲ್ಲಿ ದಾವಾ ಸ್ಥಳದಲ್ಲಿ ಸ್ವಲ್ಪ ತೋಟ ಇತ್ತು. ನಾನು ಮದುವೆ ಆಗುವ ಸಮಯದಲ್ಲಿ ನನ್ನ ತಂದೆ ತಾಯಿಯರು ಕೂಲಿ ಮಾಡುತ್ತಿದ್ದರು ಎಂದರೆ ಸರಿ. ಕೂಲಿ ಮಾಡುತ್ತಿದ್ದುದ್ದರಿಂದ ಇರಲು ಸರಿಯಾದ ವಾಸ್ತವ್ಯದ ಮನೆ ಹಾಗೂ ತೋಟ ಇರಲಿಲ್ಲ ಎಂದರೆ ಸಾಕ್ಷಿ, ನಮ್ಮ ಅಪ್ಪ ಅಮ್ಮನಿಗೆ ತೋಟ ಇತ್ತು ಎಂದು ನುಡಿಯುತ್ತಾರೆ.

2. ನಾನು ಎರಡು ಎಕರೆಗೆ ಸಂಬಂದಪಟ್ಟಂತೆ ಈ ಪ್ರಕರಣ ಸಲ್ಲಿಸಿರುತ್ತೇನೆ. ಎರಡು ಎಕರೆ ಜಾಗ ಅಪ್ಪ ಅಮ್ಮನದು.ನಾನು ಸ್ಥಳದಲ್ಲಿ ಹೋದರೆ ಗಡಿಯನ್ನು ತೋರಿಸಲು ಬರುತ್ತದೆ. ದಾವಾ ಸ್ಥಳದಲ್ಲಿ ಮೊದಲು ಗದ್ದೆ ಇತ್ತು, ತದನಂತರ ತೋಟ ಮಾಡಿರುತ್ತಾರೆ. ನಮ್ಮ ತಂದೆ ಇದ್ದಾಗ ತೋಟ ಮಾಡಿದ್ದರು. ಅಡಿಕೆ ಹಾಗೂ ತೆಂಗು ತೋಟದಲ್ಲಿ ಇರುತ್ತದೆ. ಅಡಿಕೆ, ತೆಂಗನ್ನು ಬಿಟ್ಟು ಗೋಡಂಬಿ ಇರುತ್ತದೆ.

3. ನನ್ನ, 2 ನೇ ವಾದಿ ಹಾಗೂ ಪ್ರತಿವಾದಿ 2 ಮತ್ತು 5 ರವರ ನಡುವೆ ಮೂವತ್ತು ಸಾವಿರ ರೂಪಾಯಿ ಅವರಿಬ್ಬರು ತಮಗೆ ಕೊಟ್ಟು ಜಾಗಕ್ಕೆ ಸಂಬಂದಪಟ್ಟ ಹಕ್ಕನ್ನು ಬಿಟ್ಟುಕೊಡುವಂತೆ ಮಾತುಕತೆ ಆಗಿರುತ್ತದೆ ಎಂದರೆ ಸಾಕ್ಷಿ ಐವತ್ತು ಸಾವಿರ ರೂಪಾಯಿ ಕೊಟ್ಟು ಹಕ್ಕನ್ನು ಬಿಟ್ಟು ಕೊಡುವಂತೆ ನನ್ನ, 2 ನೇ ವಾದಿ ಹಾಗೂ ಪ್ರತಿವಾದಿ 2 ಮತ್ತು 5 ರವರ ನಡುವೆ ಆಗಿತ್ತು ಎಂದು ನುಡಿಯುತ್ತಾರೆ. ಆ ಪ್ರಕಾರದಂತೆ 2 ಮತ್ತು 5 ರವರು ಜಾ.ದಲ್ಲಿ ಮನೆ ಮಾಡಿಕೊಂಡು ವಾಸವಿರುತ್ತಾರೆ ಎಂದರೆ ಸರಿ. ಇದ್ದ ಮನೆಯನ್ನು ಅಭಿವೃದ್ದಿಪಡಿಸಿರುತ್ತಾರೆ ಎಂದರೆ ಸರಿ.

4. 2 ನೇ ಪ್ರತಿವಾದಿ ಇದ್ದಂತಹ ಮನೆ ಹಾಗೂ ತೋಟವನ್ನು ಅವರೇ ಮಾಡಿರುತ್ತಾರೆ ಎಂದರೆ ಸಾಕ್ಷಿ ಮನೆಯನ್ನು ಅವರು ಕಟ್ಟಿರುತ್ತಾರೆ, ತೋಟವನ್ನು ನನ್ನ ತಂದೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರ ಸ್ಥಳ ನಾನು ಹೋದಾಗಿನಿಂದಲೂ 2 ಮತ್ತು 5 ಪ್ರತಿವಾದಿರವರ

ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸರಿ. ನಾನು ನನ್ನ ಹಕ್ಕನ್ನು ಪ್ರತಿವಾದಿ 2 ಮತ್ತು 5 ರವರಿಗೆ ಬಿಟ್ಟು ಕೊಟ್ಟು ಬೆಂಗಳೂರಿನಲ್ಲಿ ಹೋಗಿ ವಾಸವಿರುವುದರಿಂದ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

5. ಪ್ರತಿವಾದಿ 2 ಮತ್ತು 5 ರವರು ಇರುವಂಹತ ಮನೆಯನ್ನು ಪ್ರತಿವಾದಿಯರೇ ಮಾಡಿಕೊಂಡಿದ್ದು ಎಂದರೆ ಸಾಕ್ಷಿ ನಮ್ಮ ತಂದೆ ದುಡ್ಡು ಕೊಟ್ಟಿರುತ್ತಾರೆ, ಅವರು ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಮೃತರಾಗಿ 15 ವರ್ಷ ಆಗಿರುತ್ತದೆ. ತಂದೆ ಮೃತರಾದ ನಂತರ 2 ನೇ ಪ್ರತಿವಾದಿ ತೋಟ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಸ್ವಲ್ಪ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

**3** ಮತ್ತು **5** ನೇ ಪ್ರತಿವಾದಿ ಪರ ವಕೀಲರು ತಮ್ಮ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**4** ನೇ ಪ್ರತಿವಾದಿ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ